# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 513 (609)
2 ಸದಸ್ಯರ ಹೆಸರು : ಶ್ರೀ ಡಿ.ಟಿ. ಶ್ರೀನಿವಾಸ್ (ಟಿ.ಡಿ.ಎಸ್)
(ಶಿಕ್ಷಕರ ಕ್ಷೇತ್ರ)
3 ಉತ್ತರಿಸುವ ದಿನಾಂಕ: : 14-08-2025
4 ಉತ್ತರಿಸುವವರು : ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು 05 ಭಾಗಗಳಾಗಿ ವಿಂಗಡಿಸಿದ್ದು, ಇವುಗಳನ್ನು ಅಸಮರ್ಪಕವಾಗಿ ವಿಂಗಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬೆಂಗಳೂರು ನಗರವನ್ನು ಉತ್ತಮ ಬ್ರ್ಯಾಂಡ್-ಬೆಂಗಳೂರು ಮತ್ತು ಜಾಗತಿಕ ನಗರವನ್ನಾಗಿ ಮಾಡಲು ಅಧ್ಯಯನ ನಡೆಸಿ, ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ: ನಅಇ 79 ಬಿಬಿಎಸ್ 2023, ದಿನಾಂಕ:18-07-2023ರಂತೆ ರಚಿಸಲಾದ ಬ್ರ್ಯಾಂಡ್ ಬೆಂಗಳೂರು ತಜ್ಞರ ಸಮಿತಿಯ ಶಿಫಾರಸ್ಸಿನ ಮೇರೆಗೆ ದಿನಾಂಕ:19-07-2025ರ ಅಧಿಸೂಚನೆಯಲ್ಲಿ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ 5 ಸಂಖ್ಯೆಯ ನಗರ ಪಾಲಿಕೆಗಳನ್ನು ಸ್ಥಾಪಿಸಲು ಪ್ರಸ್ತಾಪಿಸಿದೆ. ಈ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ 30 ದಿನಗಳ ಕಾಲಾವಧಿಯಲ್ಲಿ ಆಕ್ಷೇಪಣೆ ಅಥವಾ ಸಲಹೆಗಳನ್ನು ಆಹ್ವಾನಿಸಲಾಗಿದ್ದು, ಕಾಲಾವಧಿಯ ಬಳಿಕ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು |
| ಆ) | ಬಂದಿದ್ದಲ್ಲಿ, ಯಾವ ರೀತಿಯ ಅಸಮರ್ಪಕತೆ ಉಂಟಾಗಿದೆ: | |
| ಇ) | ಬೆಂಗಳೂರು ಪೂರ್ವ ವಿಭಾಗಕ್ಕೆ ಕೇವಲ 02 ವಿಧಾನಸಭಾ ಕ್ಷೇತ್ರಗಳನ್ನು ನಿಗಧಿಪಡಿಸಿರುವುದು ಸರಿಯೇ; | |
| ಈ) | ಬೆಂಗಳೂರು ಸುತ್ತಮುತ್ತಲಿನ ಅಭಿವೃದ್ಧಿಯಾಗಿರುವ ಗ್ರಾಮ ಪಂಚಾಯಿತಿಗಳನ್ನು BBMP ವ್ಯಾಪ್ತಿಗೆ ವಿಲೀನಗೊಳಿಸುವ ಪ್ರಕ್ರಿಯೆ ಇದೆಯೇ: ಇದ್ದಲ್ಲಿ ಯಾವ ಗ್ರಾಮ ಪಂಚಾಯಿತಿಗಳನ್ನು BBMP ಗೆ ವಿಲೀನಗೊಳಿಸಲಾಗುವುದು: | ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 100 ಬಿಬಿಎಸ್ 2025 ಭಾ-2, ದಿನಾಂಕ:15-05-2025 ರಲ್ಲಿ "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ" ವ್ಯಾಪ್ತಿಯ ಪ್ರದೇಶವನ್ನು "ಗ್ರೇಟರ್ ಬೆಂಗಳೂರು ಪ್ರದೇಶ" ವೆಂದು ಗೊತ್ತುಪಡಿಸಿದೆ.<br><br>ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರ ಪ್ರಕರಣ 6ರನ್ವಯ ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ಹೊಂದಿಕೊಂಡಿರುವ ಮತ್ತು ಅಧಿನಿಯಮದಲ್ಲಿ ಪರಿಭಾಷಿಸಿದ ಯಾವುದೇ ಸ್ಥಳೀಯ ಪ್ರದೇಶಗಳನ್ನು ನಿಯಮಾನುಸಾರ ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ಸೇರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯನ್ನು ಹೊರತುಪಡಿಸಿ ನೂತನವಾಗಿ ಬೇರೆ ಯಾವುದೇ ತಾಲ್ಲೂಕು, ಗ್ರಾಮ ಪಂಚಾಯಿತಿ, ಪುರಸಭೆ, ನಗರ ಸಭೆ ಅಥವಾ ಗ್ರಾಮಗಳನ್ನು ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ಸೇರ್ಪಡೆಗೊಳಿಸಿರುವುದಿಲ್ಲ. |
| ಉ) | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (GBA) ಯಾವ ಯಾವ ಗ್ರಾಮ ಪಂಚಾಯಿತಿಗಳು, ಪುರಸಭೆ, ನಗರಸಭೆಗಳನ್ನು ಸೇರಿಸಿಕೊಳ್ಳಾಗುವುದು? (ಅವುಗಳ ಮಾಹಿತಿ ನೀಡುವುದು). | |

**ಸಂಖ್ಯೆ:ನಅಇ 199 ಬಿಬಿಎಸ್ 2025**

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**